ಓ.ಎಸ್. ನಂ. 01/2016

ಡಿ.ಡಬ್ಲ್ಯೂ: 01(ಕೊಟ್ರಪ್ಪ)

ದಿನಾಂಕಃ 15.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ವಾದಿ ಪರ – ಶ್ರೀ KJG ವಕೀಲರಿಂದ. (On preliminary issue)

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ರೈತ. ದಾವಾ ಆಸ್ತಿ ಮಾಳಗಿಯ ಮಣ್ಣಿನ ಮನೆ. ಅದರ ವಿಸ್ತೀರ್ಣ 24*29 ಮಳ ಇರುತ್ತದೆ. ದಾವಾ ಆಸ್ತಿ 111 ಚ.ಮೀಟರ್ ಇದೆ ಎಂದರೆ ಸರಿ. ಉಪ ನೊಂದಣಿ ಕಚೇರಿಯವರು ದಾವಾ ಆಸ್ತಿಯ ಮಾರುಕಟ್ಟೆಯ ಮೌಲ್ಯವನ್ನು ನಿರ್ಧಾರ ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಮಾರುಕಟ್ಟೆಯ ಬೆಲೆಯನ್ನು ಈಗ ನೋಡುತ್ತಿರುವ ದಾಖಲಾತಿಯಲ್ಲಿ ಬರೆದಿದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿಪಿ 9 ಎಂದು ಗುರುತಿಸಲಾಯಿತು. ನಿಪಿ 9 ರಂತೆ ದಾವಾ ಆಸ್ತಿಯ ಮೌಲ್ಯ 111*1100=1,22,100 ರೂ. ಆಗುತ್ತದೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ನಮೂದಾಗಿರುವ ಬೆಲೆ ಸದರಿ ಮನೆಯನ್ನು ಸ್ವಾಧೀನ ಪಡೆದ ಕಾರಣ ಪರಿಹಾರವಾಗಿ ಅಷ್ಟು ಬೆಲೆ ನಿಗದಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ತೋರಿಸಿರುವ ಬೆಲೆ ಮಾರುಕಟ್ಟೆಯ ಬೆಲೆ ಅಲ್ಲ ಎಂದರೆ ಸರಿಯಲ್ಲ. 2016 ರಲ್ಲಿ ದಾವಾ ಆಸ್ತಿಯ ಬೆಲೆ 80,000/- ರೂ. ಇತ್ತು ಎಂದರೆ ಸರಿಯಲ್ಲ. ಆದ ಕಾರಣ ಈ ನ್ಯಾಯಾಲಯದ ವ್ಯಾಪ್ತಿಗೆ ಈ ದಾವೆ ಬರುತ್ತದೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.